**ಓ.ಎಸ್. ನಂಃ 386/2023**

**ಡಿ.ಡಬ್ಲ್ಯೂಃ 2**

**ದಿನಾಂಕ 04.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಲ್.ವಿ.ಆರ್. ವಕೀಲರಿಂದಃ**

13. ನನಗೆ ವಾದಿಯ ಪರಿಚಯವಿದೆ. ಕಾರೀಗೌಡರಿಗೆ ವಾದಿಯು ಒಬ್ಬಳೇ ಮಗಳು ಎಂದರೆ ಸರಿ. ನಿಡಿ.31 ರ ವೀಲುನಾಮೆಯನ್ನು ತಯಾರಿಸಲು ಕಾರೀಗೌಡರು ಆಸ್ತಿಗಳ ಪಹಣಿಗಳನ್ನು, ನನ್ನ ಮತ್ತು ಕಾರೀಗೌಡರ ಫೋಟೋಗಳನ್ನು ಹಾಗೂ ಕಾರೀಗೌಡರ ಆಧಾರ್ ಕಾರ್ಡ್ ಗಳನ್ನು ಪತ್ರ ಬರಹಗಾರರಿಗೆ ನೀಡಿರುತ್ತಾರೆ. ನಿಡಿ.31 ರ ವೀಲುನಾಮೆಯನ್ನು ಬರೆಯಲು ಕಾರೀಗೌಡರು ಎಷ್ಟು ರೂಪಾಯಿ ಮೌಲ್ಯದ ಛಾಪಾ ಕಾಗದವನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

14. ನಿಡಿ.31 ರ ದಾಖಲೆ ನೊಂದಣಿ ಆಗುವ ಕಾಲಕ್ಕೆ ಉಪ-ನೊಂದಾಣಾಧಿಕರಿಯವರ ಕಚೇರಿಯು ತಾಲ್ಲೂಕು ಕಚೇರಿಯಲ್ಲಿಯೇ ನಡೆಯುತ್ತಿತ್ತು. 3 ನೇ ಪ್ರತಿವಾದಿಯು ಕಾರೀಗೌಡರ ಅಂತ್ಯಕ್ರಿಯೆಯನ್ನು ನೇರವೇರಿಸಿರುತ್ತಾರೆ ಹಾಗೂ ನಾನು ಅದರ ಸಂಬಂಧ ತಿಥಿ ಕಾರ್ಡನ್ನು ನೋಡಿರುತ್ತೇನೆ. ನೀವು ಮತ್ತು 3 ನೇ ಪ್ರತಿವಾದಿ ವಿಶ್ವಾಸದಿಂದ ಇದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ಕಾರೀಗೌಡರು ತುಂಬಾ ವಿಶ್ವಾಸದಿಂದ ಇದ್ದಿದ್ದು, ನಿಡಿ.31 ರ ವೀಲುನಾಮೆ ಆಗುವ ಕಾಲಕ್ಕೆ ನನಗೆ ಮತ್ತು 3 ನೇ ಪ್ರತಿವಾದಿಗೆ ಯಾವುದೇ ಸಂಬಂಧವಿರಲಿಲ್ಲ ಹಾಗೂ ನಿಡಿ.31 ರ ವೀಲುನಾಮೆ ಆದ ಹಲವಾರು ವರ್ಷಗಳ ನಂತರದಲ್ಲಿ 3 ನೇ ಪ್ರತಿವಾದಿಯು ನನಗೆ ಅಳಿಯ ಸಂಬಂಧಿ ಆದ ನಂತರದಲ್ಲಿ ನನ್ನ ಮತ್ತು 3 ನೇ ಪ್ರತಿವಾದಿಯ ಮಧ್ಯೆ ವಿಶ್ವಾಸ ಬೆಳೆದಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

15. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿಯು ಈ ದಾವೆಯನ್ನು 1 ರಿಂದ 3 ನೇ ಪ್ರತಿವಾದಿಯರ ವಿರುದ್ಧ ಹೂಡಿರುತ್ತಾರೆ. ನಿಡಿ.31 ರ ವೀಲುನಾಮೆಗೆ ಮೊದಲು ಕಾರೀಗೌಡರು ತಮ್ಮ ಸಹಿಯನ್ನು ಹಾಕಿದ್ದು, ಕಾರೀಗೌಡರು ಸಹಿ ಮಾಡಿದ ನಂತರದಲ್ಲಿ ನಾನು ನಿಡಿ.31 ರ ವೀಲುನಾಮೆಗೆ ನನ್ನ ಸಹಿಯನ್ನು ಹಾಕಿರುತ್ತೇನೆ. ನಾನು ನಿಡಿ.31 ರ ವೀಲುನಾಮೆಯ ಎರಡು ಕಡೆಯಲ್ಲಿ ಸಹಿ ಮಾಡಿರುತ್ತೇನೆ. ಅದೇ ರೀತಿ ಇನ್ನೊಬ್ಬ ಸಾಕ್ಷಿದಾರರಾದ ಮಲ್ಲೇಶ ರವರು ಸಹ ನಿಡಿ.31 ರ ವೀಲುನಾಮೆಗೆ ಎರಡು ಸಹಿಗಳನ್ನು ಹಾಕಿರುತ್ತಾರೆ. ಕಾರೀಗೌಡರು ನಿಡಿ.31 ರ ವೀಲುನಾಮೆಗೆ ಪತ್ರ ಬರಹಗಾರರ ಕಚೇರಿಯಲ್ಲಿ ಮತ್ತು ಉಪ-ನೊಂದಾಣಾಧಿಕಾರಿಯವರ ಕಚೇರಿಯಲ್ಲಿ ಈ ಎರಡು ಕಡೆಯಲ್ಲಿಯು ಸಹ ತಮ್ಮ ಸಹಿಗಳನ್ನು ಹಾಕಿರುತ್ತಾರೆ. ನಿಡಿ.31 ರ ವೀಲುನಾಮೆಗೆ ಕಾರೀಗೌಡರು ಪತ್ರ ಬರಹಗಾರರ ಕಚೇರಿಯಲ್ಲಿ ಎಷ್ಟು ಸಹಿಗಳನ್ನು ಹಾಕಿರುತ್ತಾರೆ ಹಾಗೂ ಉಪ-ನೊಂದಾಣಾಧಿಕಾರಿಯವರ ಕಚೇರಿಯಲ್ಲಿ ಎಷ್ಟು ಸಹಿಗಳನ್ನು ಹಾಕಿರುತ್ತಾರೆ ಎಂದು ನನಗೆ ಸರಿಯಾಗಿ ನೆನಪಿಲ್ಲ.

16. ನಿಡಿ.31 ರ ವೀಲುನಾಮೆಯನ್ನು ಉಪ-ನೊಂದಾಣಾಧಿಕಾರಿಯವರು ಓದಿ ಹೇಳಿರುವುದಿಲ್ಲ ಬದಲಾಗಿ ನಾವೇ ಸ್ವತಃ ಓದಿ ತಿಳಿದುಕೊಂಡಿರುತ್ತೇವೆ. ಕಾರೀಗೌಡರಿಗೆ ಓದಲು ಮತ್ತು ಬರೆಯಲು ಗೊತ್ತಿರಲಿಲ್ಲ ಎಂದರೆ ಸರಿ. ನಿಡಿ.31 ರ ವೀಲುನಾಮೆಯನ್ನು ಕಾರೀಗೌಡರಿಗೆ ಉಪ-ನೊಂದಾಣಾಧಿಕಾರಿಯವರು, ಪತ್ರ ಬರಹಗಾರರು ಹಾಗೂ ನಾವುಗಳ ಸಹ ಓದಿ ಹೇಳಿರುತ್ತೇವೆ. ಪತ್ರ ಬರಹಗಾರರ ಕಚೇರಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಆದರೆ ನಿಡಿ.31 ರ ವೀಲುನಾಮೆಯನ್ನು ಪತ್ರಗಾರರು ತಾಲ್ಲೂಕು ಕಚೇರಿಯಲ್ಲಿ ಬರೆದಿರುತ್ತಾರೆ.

17. ನಾನು 3 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ನಿಡಿ.31 ರ ವೀಲುನಾಮೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ನನ್ನ ಅಳಿಯನಾಗಿರುವುದರಿಂದ ನಾನು ನ್ಯಾಯಾಲಯದಲ್ಲಿ ಅವರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಡಿ.31 ರ ವೀಲುನಾಮೆ ಆಗುವ ಕಾಲಕ್ಕೆ ನನಗೆ 3 ನೇ ಪ್ರತಿವಾದಿ ಸಂಬಂಧಿಕನಾಗಿರಲಿಲ್ಲ ಎಂದು ನುಡಿದಿರುತ್ತಾರೆ. ನಿಡಿ.31 ರ ವೀಲುನಾಮೆ ಮಾಡಿದ ದಿನದಂದು ನನ್ನನ್ನು 3 ನೇ ಪ್ರತಿವಾದಿಯೇ ತಾಲ್ಲೂಕು ಕಚೇರಿಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ.

ಕಾರೀಗೌಡರು ನಿಡಿ.31 ರ ದಾಖಲೆಯನ್ನು ಬರೆಯದಿದ್ದರು ಸಹ ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ 3 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**